# ಮಕ್ಕಳೊಂದಿಗೆ ಶಿಬಿರ



# ಇದು ಮಕ್ಕಳೊಂದಿಗೆ ಶಿಬಿರಕ್ಕೆ ಹೋಗುವ ಸಮಯ!

ನನಗೆ ಶಿಬಿರಕ್ಕೆ ಹೋಗಲು ಬಹಳ ಇಷ್ಟ! ಮರಗಳ ನಡುವೆ ಇರುವದು, ನಕ್ಷತ್ರಗಳ ಕೆಳಗೆ ನಿದ್ದೆ ಮಾಡುವದು, ಮತ್ತು ಪ್ರಕೃತಿಯ ವಾಸನೆ ಸವಿಯುವದು ಬಹಳ ಖುಷಿಯಾಗಿರುತ್ತದೆ. ವಾಸನೆಗಳನ್ನು ಸವಿಯುವದು ಮತ್ತು ಶಿಬಿರದಲ್ಲಿ ಆನಂದಿಸುವದು ಅದ್ಭುತವಾಗಿರುತ್ತದೆ, ಆದರೆ ವಾಸ್ತವವೇನೆಂದರೆ ಮಕ್ಕಳನ್ನು ಶಿಬಿರಕ್ಕೆ ಕರೆದುಕೊಂಡು ಹೋಗುವದು ಸಹಜವಾಗಿ ಅವರ ಜೀವಿತಗಳಲ್ಲಿ ದೊಡ್ಡ ಬದಲಾವಣೆಗಳನ್ನು ತರುತ್ತದೆ. ನಾವು ಅವರೊಳಗಿರುವ ವಿಷಯಗಳನ್ನು ಹೊರಗೆ ತೆಗೆಯುತ್ತೇವೆ ಮತ್ತು ದೇವರೊಂದಿಗೆ ಬೆರೆಯಲು ಅವರಿಗೆ ಸಹಾಯ ಮಾಡುತ್ತೇವೆ. ಇದಕ್ಕೆ ಯಾವುದನ್ನೂ ಹೋಲಿಸಲು ಆಗುವದಿಲ್ಲ.

ಮಗುವಾಗಿ, ನಾನು ಪ್ರತಿ ವರ್ಷ ಶಿಬಿರಗಳಲ್ಲಿ ದೇವರಿಗಾಗಿ ಅನೇಕ ಸಮರ್ಪಣೆಗಳನ್ನು ಮಾಡುತ್ತಿದ್ದೆನು, ಮತ್ತು ದೇವರು ನನ್ನ ಪ್ರಾರ್ಥನೆಗಳನ್ನು ಕೇಳುತ್ತಿದ್ದಾನೆಂಬದು ನನಗೆ ಗೊತ್ತಿತ್ತು. ನನ್ನ ಸಭೆಯ ವಿಶ್ವಾಸಿಗಳೊಂದಿಗೆ ಶಿಬಿರಕ್ಕೆ ಹೋಗುವ ಅವಕಾಶ ನನಗೆ ಸಿಗುತ್ತಾ ಇತ್ತು ಯಾಕಂದರೆ ನಾನು ಸತ್ಯವೇದದ ವಚನಗಳನ್ನು ಕಂಠಪಾಠ ಮಾಡಿ ಹೇಳುತ್ತಿದ್ದ ಕಾರಣ ಅವರು ಬಹುಮಾನ ಕೊಡುವ ಬದಲು ಅಲ್ಲಿಗೆ ಕರೆದುಕೊಂಡು ಹೋಗುತ್ತಿದ್ದರು. ನಾನು ಪ್ರತಿವರ್ಷ ಬಹಳ ಕಷ್ಟಪಡುತ್ತಿದ್ದೆನು ಮತ್ತು ಶಿಬಿರಕ್ಕೆ ಹೋಗುವ ಪ್ರವೇಶವನ್ನು ಸಂಪಾದಿಸಿಕೊಳ್ಳುತ್ತಿದ್ದೆನು! ನನಗೆ ಸಹಾಯ ಮಾಡಿದ ಮತ್ತು ನನ್ನ ಜೀವಿತದಲ್ಲಿ ಹೂಡಿಕೆಯನ್ನು ಮಾಡಿದ ಆ ಎಲ್ಲಾ ಶಿಕ್ಷಕರಿಗೆ ಮತ್ತು ನಾಯಕರಿಗೆ ಕೃತಜ್ಞತೆಯುಳ್ಳವನಾಗಿದ್ದೇನೆ, ಯಾಕಂದರೆ ಅವರಲ್ಲಿ ಎಷ್ಟೋ ಜನರು ನಾನು ಶಿಬಿರದಲ್ಲಿ ಭಾಗಿಯಾಗಲು ನನಗೆ ಸಹಾಯ ಮಾಡಿದ್ದಾರೆ ಮತ್ತು ಶಿಬಿರದಲ್ಲಿ ನನಗೆ ಅನೇಕ ವಿಷಯಗಳನ್ನು ಕಲಿಸಿದ್ದಾರೆ.

ನಿಮ್ಮ ತರಗತಿಯೊಂದಿಗೆ ಪ್ರಕೃತಿಯ ಸೌಂದರ್ಯವನ್ನು ಸವಿಯುವ ವಿಹಾರಕ್ಕೆ ಹೋಗಲು ಬೇಕಾದ ಯೋಜನೆ ರೂಪಿಸಲು ಶ್ರಮ ಹಾಕಿರಿ ಎಂದು ನಾನು ನಿಮ್ಮನ್ನು ಪ್ರೋತ್ಸಾಹಪಡಿಸುತ್ತೇನೆ. ತಮಾಷೆಯಾಗಿ ಪಾದಯಾತ್ರೆಗೆ ಹೋಗಲು ಯೋಚನೆ ಮಾಡಿರಿ, ಊಟದ ಬಗ್ಗೆ ಯೋಚನೆ ಮಾಡಿರಿ, ಮತ್ತು ಅವರೊಂದಿಗೆ ದೇವರ ಬಗ್ಗೆ ಹಂಚಿಕೊಳ್ಳಿರಿ. ಇದೆಲ್ಲಾ ನೆರವೇರಬೇಕಾದರೆ ಪರಿಶ್ರಮ, ತಕ್ಕ ಯೋಚನೆ, ಹಣ ಬೇಕಾಗುತ್ತದೆ ಮತ್ತು ಕೆಲವೊಮ್ಮೆ ಅನಾನುಕೂಲತೆ ಉಂಟಾಗುತ್ತದೆ. (ನನಗೆ ನೆಲದ ಮೇಲೆ ಮಲಗಿಕೊಳ್ಳಲು ಆಗುವದಿಲ್ಲ!) ಆದರೆ ನಿಮಗೆ ಈಗಾಗಲೇ ಗೊತ್ತಿರುವಂತೆ, ಇದೆಲ್ಲಾ ಅರ್ಹವಾದದ್ದಾಗಿದೆ!

ನೀವು ನಿಮ್ಮ ತರಗತಿಯೊಂದಿಗೆ ಶಿಬಿರಕ್ಕೆ ಹೋಗುವ ಮೊದಲು ಒಂದು ಸಲಹೆ; ಕರೆದುಕೊಂಡು ಹೋಗುವ ಮಕ್ಕಳ ಸಂಖ್ಯೆಯೊಂದಿಗೇ ಮನೆಗೆ ಹಿಂದಿರುಗಿರಿ (ಹಾ ಹ)!



ಸಂತೋಷಕರವಾದ ಪಾದಯಾತ್ರೆ,



ಸಿಸ್ಟರ್ ಕ್ರಿಸ್ಟಿನಾ ಕ್ರಾಸ್

# ಅನುಕ್ರಮಣಿಕೆ




ಇದು ಮಕ್ಕಳೊಂದಿಗೆ ಶಿಬಿರಕ್ಕೆ

ಹೋಗುವ ಸಮಯ! ........................ 1

ಅನುಕ್ರಮಣಿಕೆ........................... 2

ನಾಯಕತ್ವ ................................ 3-4

ಪಾದಯಾತ್ರೆ (ದೀರ್ಘಪ್ರಯಾಣ).... 5-6

ಕರಕುಶಲ ...................................... 7-8

ಆಹಾರ........................................... 9-11

ಭದ್ರತೆ ........................................ 12

ಹೆಚ್ಚುವರಿ ಆಲೋಚನೆಗಳು ............. 13-14

# 1. ನೇಮಕಾತಿ/ಆಹ್ವಾನ



ವೈಯಕ್ತಿಕವಾಗಿ ನಾಯಕರನ್ನು ಮತ್ತು ಮಕ್ಕಳನ್ನು ಶಿಬಿರಕ್ಕೆ ಆಹ್ವಾನಿಸಿರಿ: "ನೀವು ನನ್ನೊಂದಿಗೆ ಶಿಬಿರಕ್ಕೆ ಬರಬೇಕೆಂದು ನಾನು ಬಯಸುತ್ತೇನೆ." ಬೇರೆಯವರನ್ನೂ ಸೇರಿಸಿಕೊಳ್ಳಿರಿ. ಅವರಿಗೂ ನಿಮ್ಮೆಲ್ಲಾ ಸ್ನೇಹಿತರನ್ನು ಶಿಬಿರಕ್ಕೆ ಆಹ್ವಾನಿಸಿರಿ ಎಂದು ಹೇಳಿರಿ. ಮುಂಗಡವಾಗಿಯೇ ಕೇಳಿರಿ, ಆಗಾಗ ಕೇಳಿರಿ, ಎಲ್ಲರನ್ನೂ ಕೇಳಿರಿ ಮತ್ತು ಮತ್ತೆಮತ್ತೆ ಕೇಳಿರಿ. ಉದಾಹರಣೆಗೆ, ಒಬ್ಬ ನಾಯಕನು ಒಂದು ಮಗುವನ್ನು ಸುಮಾರು ಡಜ಼ನ್ ಸಾರಿ ಶಿಬಿರಕ್ಕೆ ಆಹ್ವಾನಿಸಿದನು, ಮತ್ತು ಹದಿಮೂರನೇ ಸಾರಿ, ಆ ಹುಡುಗ ಬರುತ್ತೇನೆಂದು ಒಪ್ಪಿಕೊಂಡನು. ಅವನು ಶಿಬಿರಕ್ಕೆ ಹೋದನು ಮತ್ತು ಅಲ್ಲಿ ಯೇಸು ಕ್ರಿಸ್ತನನ್ನು ತನ್ನ ಸ್ವಂತ ರಕ್ಷಕನನ್ನಾಗಿ ಅಂಗೀಕರಿಸಿಕೊಂಡನು!

ಒರಟಾಗಿ ನಡೆದುಕೊಳ್ಳಬೇಡಿರಿ, ಹಾಗೆಯೇ ನಿರಾಸೆಗೊಳ್ಳಬೇಡಿರಿ. ದಿನನಿತ್ಯದ ಕಾರ್ಯಗಳನ್ನು ಬಿಟ್ಟು ಹೊರಗೆ ಹೋದಾಗ ಹೆಚ್ಚು ಸಮಯ ಕಳೆದರೆ ಮಕ್ಕಳು ಕರ್ತನ ವಿಷಯದಲ್ಲಿ ಹೆಚ್ಚು ಆಸಕ್ತರಾಗಲು ಮತ್ತು ತಮ್ಮ ಜೀವಿತಗಳಲ್ಲಿ ದೊಡ್ಡ ಬದಲಾವಣೆಗಳನ್ನು ಸಾಧಿಸಲು ಸಾಧ್ಯವಾಗುತ್ತದೆ . . . ಆದ್ದರಿಂದ ಶಿಬಿರಕ್ಕೆ ಬರುವಂತೆ ಆ ಮಕ್ಕಳ ಮನವೊಲಿಸಿರಿ!

# 2. ಸಣ್ಣ ಗುಂಪುಗಳನ್ನು ಮುನ್ನಡೆಸುವದು



ಮಕ್ಕಳು ಹಂಚಿಕೊಳ್ಳಲು, ಮಾತನಾಡಲು ಮತ್ತು ಯೋಚಿಸಲು ಮುಂದಾಗುವಂಥ ವಾತಾವರಣವನ್ನು ಸೃಷ್ಟಿಸುವದು ನಮ್ಮ ಕೆಲಸವಾಗಿದೆ. ವಿಶ್ವಾಸಾರ್ಹತೆ ಇರಬೇಕು; ಆದ್ದರಿಂದ, ಶಿಬಿರದಲ್ಲಿ ಹೇಳಲಾಗಿರುವದು ಶಿಬಿರದಲ್ಲಿಯೇ ಇರಬೇಕು ಎಂದು ಎಲ್ಲರಿಗೂ ಜ್ಞಾಪಕಪಡಿಸಿರಿ. ಮಕ್ಕಳಿಗೆ ಒಬ್ಬರನ್ನೊಬ್ಬರು ಪರಿಚಯ ಮಾಡಿಕೊಳ್ಳುವ ಮತ್ತು ತಮ್ಮ ನಾಯಕನನ್ನು ತಿಳಿದುಕೊಳ್ಳಲು ಸಹಾಯ ಮಾಡುವ "ಅನುಕೂಲಕರ ವಾತಾವರಣದ" ಕ್ಷಣಗಳನ್ನು ಸೃಷ್ಟಿಸಿರಿ. "ಹೌದು ಅಥವಾ ಇಲ್ಲ" ಎಂಬ ಉತ್ತರಗಳಿಲ್ಲದಂಥ ಗುಣಮಟ್ಟದ ಪ್ರಶ್ನೆಗಳನ್ನು ಕೇಳಿರಿ. "ಇಂದು ನಿಮಗೆ ಖುಷಿಯಾಯಿತೇ?" ಎಂದು ಕೇಳುವ ಬದಲು "ಇಂದು ನಿಮಗೆ ಬಹಳ ಇಷ್ಟವಾದ ಭಾಗ ಯಾವುದು?" ಎಂದು ಕೇಳಿರಿ. ಬಹುತೇಕ ನಾಯಕರು ಶಿಬಿರದಲ್ಲಿ ಸಣ್ಣ ಗುಂಪುಗಳಿರುವಾಗ ಬಹಳವಾಗಿ ಮಾತನಾಡುತ್ತಾರೆ. ಮಕ್ಕಳು ಮಾತನಾಡಲಿ. ಆಗ ಮಾತುಕತೆಗಳನ್ನು ದ್ರವದ ರೀತಿಯಲ್ಲಿ ನಡೆಸಲಾಗುತ್ತದೆ, ಮಕ್ಕಳನ್ನು ಸತತವಾಗಿ ದೃಢಪಡಿಸಿರಿ, ನಿಮ್ಮ ದುರ್ಬಲತೆಯನ್ನು ಮಾದರಿಯಾಗಿ ತೋರಿಸಿರಿ, ಮತ್ತು ಹೆಚ್ಚಿನ ಪ್ರಶ್ನೆಗಳೊಂದಿಗೆ ಪ್ರಶ್ನೆಗಳಿಗೆ ಉತ್ತರಿಸಿರಿ! ಎಲ್ಲರೂ ಉತ್ತರಿಸಬೇಕೆಂಬ ನಿರೀಕ್ಷೆಯೊಂದಿಗೆ ನೀವು ಒಂದು ಪ್ರಶ್ನೆಯನ್ನು ಕೇಳುವಾಗ, ಸುತ್ತಲೂ ಒಂದು ವಸ್ತುವನ್ನು ಅಂದರೆ, ಬಟ್ಟೆಯಿಂದ ಮಾಡಲಾಗಿರುವ ಪ್ರಾಣಿಯನ್ನು ಅಥವಾ ಕೊಳಕಾಗಿರುವ ಸಾಕ್ಸ್ ಗಳನ್ನು ಇಡಿರಿ, ಈ ಯೋಜನೆ ಕೆಲವೊಮ್ಮೆ ಸಫಲವಾಗುತ್ತದೆ. ನೀವು ನೆಲದ ಮೇಲೆ ಯಾವುದೇ ವಸ್ತುವನ್ನು ಇಟ್ಟರೂ ಅದು ಸಫಲವಾಗುತ್ತದೆ. ಯಾವ ವ್ಯಕ್ತಿಯ ಕೈಗೆ ಆ ವಸ್ತು ಸಿಗುತ್ತದೆಯೋ ಆ ವ್ಯಕ್ತಿ ಯಾರ ಮಾತನಾಡಬೇಕೆಂಬ ಆಯ್ಕೆಯನ್ನು ಮಾಡಿ ಅದನ್ನು ಅವನ ಅಥವಾ ಅವಳ ಕಡೆಗೆ ಎಸೆಯಬೇಕು. ಆದರೂ, ಮಕ್ಕಳಿಗೆ ಯಾವಾಗಲೂ ಮೌನವಾಗಿರುವ ಅಧಿಕಾರ ಇರುತ್ತದೆ. ಅವರು ವಸ್ತುವನ್ನು ಹಿಡಿದುಕೊಳ್ಳುತ್ತಾರೆ ಮತ್ತು "ಮುಂದಿನವರು" ಎಂದು ಹೇಳಿ ಮಾತನಾಡುವ ಸಲುವಾಗಿ ಮುಂದಿನ ವ್ಯಕ್ತಿಗೆ ವಸ್ತುವನ್ನು ಎಸೆಯುತ್ತಾರೆ. ಈ ರೀತಿಯಾಗಿ, ಅವರಿಗೆ ಭಾಗವಹಿಸುವ ಅವಕಾಶ ದೊರೆಯುತ್ತದೆ, ಆದರೆ ಭಾಗವಹಿಸುವಂತೆ ಅವರ ಮೇಲೆ ಯಾವುದೇ ಒತ್ತಡ ಹಾಕಲಾಗುವದಿಲ್ಲ. ನಾವು ವಿದ್ಯಾರ್ಥಿಗಳಿಗೆ ಎಷ್ಟು ಅನುಕೂಲಕರ ವಾತಾವರಣವನ್ನು ಕೊಡುತ್ತೇವೋ, ಅಷ್ಟು ಹೆಚ್ಚಾಗಿ ಅವರು ತಮ್ಮ ಹೃದಯಗಳನ್ನು ತೆರೆಯುತ್ತಾರೆ ಮತ್ತು ಶಿಬಿರದಲ್ಲಿ ನಾವು ಅವರಿಗಾಗಿ ಸಿದ್ಧಮಾಡಿರುವದನ್ನು ಅಂಗೀಕರಿಸಿಕೊಳ್ಳುತ್ತಾರೆ!

## 3. ಸಣ್ಣ ಗುಂಪುಗಳ ನಾಯಕರ ದರ್ಶನ



ಶಿಬಿರದಲ್ಲಿರುವ ಗುಂಪಿನ ನಾಯಕರು ಈ ಕಾರ್ಯಕ್ರಮದ ಅತ್ಯಂತ ಪ್ರಮುಖವಾದ ಭಾಗವಾಗಿದ್ದಾರೆ. ನಂಬಿರಿ ಅಥವಾ ಬಿಡಿರಿ, ಶಿಬಿರದಲ್ಲಿ ನಡೆಯುವ ಪ್ರತಿಯೊಂದು ಕಾರ್ಯಗಳು ಮತ್ತು ಅಸ್ತಿತ್ವದಲ್ಲಿರುವ ಪ್ರತಿಯೊಂದು ವಿವರವು ಸಣ್ಣ ಗುಂಪುಗಳ ನಾಯಕರು ಮಕ್ಕಳೊಂದಿಗೆ ಸಂಭಾಷಣೆಗಳನ್ನು ನಡೆಸಲು ಸಹಾಯ ಮಾಡುವದಕ್ಕಾಗಿಯೇ ಅವೆ, ಇದಲ್ಲದೆ ಆ ಸಂಭಾಷಣೆಗಳ ಸಮಯದಲ್ಲಿ ಯೇಸು ಕ್ರಿಸ್ತನೊಂದಿಗೆ ವೈಯಕ್ತಿಕ ಸಂಬಂಧವನ್ನು ಹೊಂದುವದರ ಬಗ್ಗೆಯೂ ಆಲೋಚಿಸುವಂತೆ ಹೇಳಲಾಗುತ್ತದೆ. ಕೆಲವು ಸಮಯಗಳಲ್ಲಿ, ಕಾರ್ಯಕ್ರಮದ ನಿರ್ದೇಶಕರು, ಸಮಾರಂಭಗಳ ಅಧ್ಯಕ್ಷರು, ಅಥವಾ ಸಂಗೀತಗಾರರು ಶಿಬಿರದಲ್ಲಿ ಅತ್ಯಂತ ಪ್ರಾಮುಖ್ಯರಾದ ಜನರೆಂದು ಅನ್ನಿಸುತ್ತದೆ. ಆದರೆ ಅವರ ಪ್ರಖ್ಯಾತಿಯು ತಾತ್ಕಾಲಿಕವಾಗಿರುತ್ತದೆ, ಮತ್ತು ಮಕ್ಕಳೊಂದಿಗೆ ನಾವು ಮಾಡಿಕೊಳ್ಳುವ ಸ್ನೇಹ ಹಾಗಿರುವದಿಲ್ಲ. ಸಣ್ಣ ಗುಂಪಿನ ನಾಯಕರು ತಮ್ಮ ವಿದ್ಯಾರ್ಥಿಗಳೊಂದಿಗೆ ಮನೆಗೆ ಹೋಗುತ್ತಾರೆ ಮತ್ತು ಅನೇಕ ವರ್ಷಗಳ ತನಕ ಅವರೊಂದಿಗೆ ಸಂಪರ್ಕದಲ್ಲಿರುತ್ತಾರೆ. ನಿಮ್ಮ ನಾಯಕರಿಗೆ ಶಿಬಿರದಲ್ಲಿ ಅವರ ಪಾತ್ರ ಏನೆಂದು ಚೆನ್ನಾಗಿ ಗೊತ್ತಿರುವದನ್ನು ದೃಢಪಡಿಸಿಕೊಳ್ಳಿರಿ.

## 4. ಮಗುವನ್ನು ಕ್ರಿಸ್ತನ ಕಡೆಗೆ ಮುನ್ನಡೆಸುವದು



ಯಾರೋ ಒಬ್ಬರು ಸಿದ್ಧರಾಗಿದ್ದಾರೆ ಎಂದು ಅವರಿಗೆ ಅನ್ನಿಸುವಾಗ, “ಯೇಸು ಕ್ರಿಸ್ತನೊಂದಿಗೆ ವೈಯಕ್ತಿಕ ಸಂಬಂಧವನ್ನು ಹೊಂದಲು ನೀವು ಇಷ್ಟಪಡುತ್ತೀರೋ?” ಅಥವಾ “ನೀವು ಕ್ರೈಸ್ತರಾಗಲು ಇಷ್ಟಪಡುತ್ತೀರೋ?” ಎಂಬ ಪ್ರಶ್ನೆಯನ್ನು ಕೇಳಲು ನಾಯಕರು ಸಿದ್ಧರಾಗಿರುವದು ಪ್ರಾಮುಖ್ಯವಾಗಿರುತ್ತದೆ.

ಈ ಕೆಳಗೆ ಮಾದರಿಯ ಪ್ರಾರ್ಥನೆಯನ್ನು ಕೊಡಲಾಗಿದೆ:
“ಯೇಸುವೇ, ಇಂದು ನಿನ್ನೊಂದಿಗೆ ಮಾತನಾಡುವ ಸೌಭಾಗ್ಯ ನನಗೆ ಸಿಕ್ಕಿದೆ! ನನ್ನ ಜೊತೆಯಲ್ಲಿ ಒಬ್ಬರಿದ್ದಾರೆ ನಾನು ಅವರನ್ನು ನಿನಗೆ ಪರಿಚಯಪಡಿಸಲು ಬಯಸುತ್ತೇನೆ. ಕಳೆದುಹೋಗಿದ್ದ ನಿನ್ನ ಮಗನಾದ, ______________, ಈಗ ನಿನ್ನ ಬಳಿಗೆ ಬಂದಿದ್ದಾನೆ! ನಿನ್ನನ್ನು ಬಿಟ್ಟು ಜೀವಿಸಲು ಆಗುವದಿಲ್ಲ ಎಂಬ ತೀರ್ಮಾನಕ್ಕೆ ಅವನು ಬಂದಿದ್ದಾನೆ. ಅವನು ತನ್ನ ಹಳೆಯ ಯೋಜನೆ ಮತ್ತು ಜೀವನ ಶೈಲಿಯನ್ನು ತೊರೆದಿದ್ದಾನೆ ಮತ್ತು ನಿನ್ನ ಕಡೆಗೆ ಬರಲು ಪ್ರಾರಂಭಿಸಿದ್ದಾನೆ, ಯೇಸುವೇ. ಅವನನ್ನು ಕ್ಷಮಿಸಿದ್ದಕ್ಕಾಗಿ ಸ್ತೋತ್ರ. ಹೀಗೆ ನಿನ್ನ ಬಳಿಗೆ ಬರುವವರನ್ನು ಸ್ವೀಕರಿಸಿಕೊಳ್ಳಲು ನೀನು ಓಡಿ ಬರುವದಕ್ಕೆ ನಿನಗೆ ಕೃತಜ್ಞತೆಗಳನ್ನು ಸಲ್ಲಿಸುತ್ತೇವೆ. ಮನೆಗೆ ಬಂದಿರುವ ಈ ಮಗುವಿನೊಂದಿಗೆ ನೀನು ಮಾಡುವ ಎಲ್ಲಾ ಕಾರ್ಯಗಳನ್ನು ನಾನು ಎದುರುನೋಡುತ್ತಾ ಇದ್ದೇವೆ. ಮೊದಲನೆಯದಾಗಿ ಇದನ್ನು ಆಚರಿಸಲು ಇಂದು ರಾತ್ರಿ ನೀನು ಪರಲೋಕದಲ್ಲಿ ದೊಡ್ಡ ಔತಣವನ್ನು ಏರ್ಪಡಿಸುವೆ ಎಂದು ನಮಗೆ ಗೊತ್ತಿದೆ. ನಾವೂ ಆಚರಿಸುತ್ತೇವೆ! ತಂದೆಯೇ, ____________ ನನ್ನು ನಿನ್ನ ಎರಡೂ ಕೈಗಳನ್ನು ಚಾಚಿ ಮನೆಗೆ ಸ್ವಾಗತಿಸಿಕೊಂಡದ್ದಕ್ಕಾಗಿ ನಿನಗೆ ಸ್ತೋತ್ರಗಳು. ನಿನ್ನೊಂದಿಗೆ ಮನೆಯಲ್ಲಿ ವಾಸಮಾಡುವದೆಂದರೆ ಏನು ಎಂಬದನ್ನು ತಿಳಿದುಕೊಳ್ಳಲು ನೀನು ಅವರಿಗೆ ಸಹಾಯ ಮಾಡುವೆ ಎಂದು ನಾವು ನಿರೀಕ್ಷಿಸುತ್ತೇವೆ. ಆಮೆನ್.”

ಮಕ್ಕಳನ್ನು ಕರ್ತನ ಕಡೆಗೆ ನಡೆಸಿದ ನಂತರ, ಅವರೊಂದಿಗೆ ಸಂಪರ್ಕವನ್ನು ಸಾಧಿಸಿರಿ, ಮತ್ತು ತಮಗೆ ಸಂಭವಿಸಿದ್ದನ್ನು ಇತರರಿಗೆ ತಿಳಿಸಲು ಅವರಿಗೆ ಸಹಾಯ ಮಾಡಿರಿ. ತಾವು ಯಾವ ರೀತಿ ಕ್ರಿಸ್ತನನ್ನು ಅಂಗೀಕರಿಸಿಕೊಂಡೆವು ಮತ್ತು ಈಗ ಯಾವ ರೀತಿ ಕ್ರೈಸ್ತರಾಗಿದ್ದೇವೆ ಎಂಬದನ್ನು ವಾರಾಂತ್ಯದಲ್ಲಿ

ಎಲ್ಲರೊಂದಿಗೆ ಹಂಚಿಕೊಳ್ಳುವ ಸಾಧ್ಯತೆಯ ಬಗ್ಗೆ ಅವರ ಸಂಗಡ ಮಾತನಾಡಿರಿ. ಅವರು ಮನೆಗೆ ಹಿಂದಿರುಗಿ ಬರುವಾಗ ಅವರೊಂದಿಗೆ ಜೀವದ ಬಗ್ಗೆ ಮಾತನಾಡಿರಿ, ಮತ್ತು ಒಂದುವೇಳೆ ನಿಮ್ಮಿಂದಾದರೆ, ಅವರು ಸಹಾಯಕ ಪುಸ್ತಕಗಳನ್ನು ಅಥವಾ ಹೊಸ ಒಡಂಬಡಿಕೆಯನ್ನು ಕೊಡಿರಿ.

## 5. ನೆನಪಿನ ನಡೆ



ಶಿಬಿರ ಅಥವಾ ಪಾದಯಾತ್ರೆಯ ವಾತಾವರಣದಂಥ: ರಥ, ಓಕ್ ಮರದ ಹಣ್ಣು, ಕಲ್ಲು, ಉದ್ದ ಕೊಂಬೆ, ಮೇಕುಗಳಿರುವ ಕೊಂಬೆ, ಮರದ ಎಲೆ, ಉತ್ಸವಾಗ್ನಿಗೆ ಮರದ ತುಂಡು, ಇತ್ಯಾದಿ. (ಸುಮಾರು ಹತ್ತು ವಸ್ತುಗಳು.) ಜಾಕೆಟ್, ಟೀ-ಶರ್ಟ್, ಕಂಬಳಿ, ಅಥವಾ ಸ್ಕಾರ್ಫ್ ಕೆಳಗಿಟ್ಟು ಅವುಗಳನ್ನು ಬಚ್ಚಿಡಿರಿ. ನಂತರ ಶಿಬಿರದಲ್ಲಿರುವವರು ನಿಮ್ಮ ಸುತ್ತಮುತ್ತಲಿನಲ್ಲಿರುವದರಿಂದ, ವಸ್ತುಗಳನ್ನು ತೆಗೆಯಿರಿ ಮತ್ತು ಮಕ್ಕಳು ಅವುಗಳನ್ನು ಐದರಿಂದ ಹತ್ತು ಕ್ಷಣಗಳ ತನಕ ನೋಡಲಿ. ಶಿಬಿರ ಅಥವಾ ಮಾರ್ಗದ ಸುತ್ತಲು ಅನನ್ಯವಾಗಿರುವಂಥ ವಸ್ತುಗಳನ್ನು ಹುಡುಕಲು ನಿಮ್ಮ ಶಿಬಿರದಲ್ಲಿರುವವರನ್ನು ಕಳುಹಿಸಿರಿ. ಐದರಿಂದ ಹದಿನೈದು ನಿಮಿಷಗಳ ಸಮಯವನ್ನು ನಿಗದಿಪಡಿಸಿರಿ. ವಯಸ್ಸಿನಲ್ಲಿ ಚಿಕ್ಕವರು ಇಬ್ಬಿಬ್ಬರಾಗಿ ಹೋಗಬೇಕು. "ಸ್ನೇಹಿತರ ವ್ಯವಸ್ಥೆಯ" ಭದ್ರತೆಯನ್ನು ನೆನಪಿಸಿಕೊಳ್ಳಿರಿ. ಅವರಿಗೆ ವಸ್ತುಗಳ ಪಟ್ಟಿಯನ್ನು ಕೊಡಬೇಡಿರಿ, ಯಾಕಂದರೆ ಇದು ನೆನಪಿನ ಚಟುವಟಿಕೆಯಾಗಿದೆ. ಹೆಚ್ಚಿನ ವಸ್ತುಗಳನ್ನು ತೆಗೆದುಕೊಂಡು ಬರುವ ಶಿಬಿರಾರ್ಥಿ ಗೆಲ್ಲುತ್ತಾರೆ.

## 6. ಪ್ರಕೃತಿಯ ನಡೆ



ಸುರಕ್ಷಿತ, ಮೌನ ಮತ್ತು ಸುಂದರವಾಗಿರುವ ಉದ್ಯಾನವನ ಅಥವಾ ಅರಣ್ಯಕ್ಕೆ ಹೋಗಲು ಮಕ್ಕಳಿಗೆ ಸಮಯವನ್ನು ಕೊಡಿರಿ. ಹೂವುಗಳನ್ನು ಸರಳವಾಗಿ ಅವಲೋಕಿಸಲು, ಶಬ್ದಗಳನ್ನು ಕೇಳಿಸಿಕೊಳ್ಳಲು, ಹುಲ್ಲಿನ ಮೇಲೆ ಮಲಗಲು, ಇತ್ಯಾದಿ ಕಾರ್ಯಗಳಿಗೆ ಅವರಿಗೆ ಸಮಯವನ್ನು ಕೊಡಿರಿ. ಒಂದು ಕ್ಷಣ ಯೋಚಿಸುವದಕ್ಕಾಗಿ ಅವರು ಏನಾದರೂ ಹುಡುಕಲಿ ಮತ್ತು ದೇವರಿಗೆ ಕೃತಜ್ಞತೆ ಸಲ್ಲಿಸಲಿ ಅಥವಾ ಅದರ ವಿಷಯವಾಗಿ ದೇವರೊಂದಿಗೆ ಮಾತನಾಡಲಿ. ಹಿಂದಿರುಗಿ ಬಂದ, ಕೆಲವು ಸಮಯದ ನಂತರ ಗುಂಪಿನ ಉಳಿದವರೊಂದಿಗೆ ತಮ್ಮ ಅನುಭವವನ್ನು ಹಂಚಿಕೊಳ್ಳಲು ಕೆಲವು ಮಕ್ಕಳಿಗೆ ಹೇಳಿರಿ. ಮರಗಳ ನಡುವೆ ಊಟ ಮಾಡಲು ನೀವು ಊಟವನ್ನು ತೆಗೆದುಕೊಳ್ಳಬಹುದು ಅಥವಾ ಪ್ರಾಣಿಗಳ ದಾರಿಗಳನ್ನು ಹುಡುಕಬಹುದು. ಹೆಚ್ಚಿನ ಸಂತೋಷಕ್ಕಾಗಿ, ನಾಯಕರು ಮೊದಲೇ ಕೆಲವು ದಾರಿಗಳನ್ನು ಸಿದ್ಧಮಾಡಿರಬೇಕು, ಆದ್ದರಿಂದ ಹುಡುಗರು ಅವುಗಳನ್ನು ಹುಡುಕಬಹುದು!

# ಪಾದಯಾತ್ರೆ (ದೀರ್ಘ ಪ್ರಯಾಣ)

## 7. ಬೇಟೆಯ ನಡೆ

ಪ್ರತಿಯೊಂದು ತಂಡಕ್ಕೆ ಪ್ರಕೃತಿಯಿಂದ ಸಂಗ್ರಹಿಸುವ ವಸ್ತುಗಳ ಪಟ್ಟಿಯನ್ನು ಕೊಡಬೇಕು. ಎಲ್ಲಾ ತಂಡಗಳಿಯೂ ಒಂದೇ ಪಟ್ಟಿ ಇರುತ್ತದೆ. ಅವರು ಕಡೇಪಕ್ಷ ಇಬ್ಬಿಬ್ಬರಾಗಿ ಹೋಗಬೇಕು ಮತ್ತು ಎಷ್ಟು ದೂರ ಹೋಗಬೇಕು ಎಂಬದನ್ನೂ ನಿಗದಿಪಡಿಸಿಕೊಳ್ಳಬೇಕು. ಈ ಪಟ್ಟಿಯಲ್ಲಿ ನೀವು ಏನೇನು ಸೇರಿಸಬಹುದು ಎಂಬದರ ಪಟ್ಟಿ ಇಲ್ಲಿದೆ:



• ಹಣ್ಣು.
• ಎಲೆ.
• ಪಾದರಕ್ಷೆಗಿಂತಲೂ ದೊಡ್ಡದು.
• ಒಂದು ಕಡೆ ಮೃದುವಾಗಿರುವಂಥದ್ದು ಮತ್ತು ಇನ್ನೊಂದು ಕಡೆ ಒರಟಾಗಿರುವಂಥದ್ದು.
• ಏನಾದರು ಉಡುಗೊರೆ.
• ಏನಾದರು ಸಡಿಲ ಮತ್ತು ಉದ್ದವಾಗಿರುವಂಥದ್ದು.
• ಏನಾದರು ಅವರ ನಾಯಕನಿಗೆ.
• ತುಂಬಾ ಚಿಕ್ಕದಾಗಿರುವ ಅಥವಾ ವಿಚಿತ್ರವಾದ ಕಲ್ಲು.

ಕೊನೆಯಲ್ಲಿ, ಪ್ರತಿಯೊಂದು ಗುಂಪು ಇತರರಿಗೆ ತಾವು ಏನು ಸಂಗ್ರಹಿಸಿದ್ದೇವೆ ಎಂದು ತೋರಿಸಬೇಕು. ಈ ಪಟ್ಟಿಯ ವಿಭಿನ್ನ ವ್ಯಾಖ್ಯಾನಗಳನ್ನು ನೋಡುವದರಲ್ಲಿ ಹೆಚ್ಚು ಸಂತೋಷವಿರುತ್ತದೆ!

## 8. ಶಿಳ್ಳೆಯ ನಡೆ



ಒಂದು ಮಗು "ನರಿಯಾಗಿರಬೇಕು" ಮತ್ತು ಆತನಿಗೆ ಶಿಳ್ಳೆಯನ್ನು ಕೊಡಬೇಕು. ಅವನು/ಅವಳು ಉಳಿದ ಮಕ್ಕಳಿಗಿಂತ ಮೊದಲು ಕಾಡಿನೊಳಗೆ ಅಥವಾ ಮರಗಳ ನಡುವೆ ಹೋಗಬೇಕು. "ನರಿ" ಆಗಾಗ ಶಿಳ್ಳೆಯನ್ನು ಊದಬೇಕು ಆಗ ಬೇರೆ ಮಕ್ಕಳು ಅವನನ್ನು/ಅವಳನ್ನು ಶಬ್ದವನ್ನು ಕೇಳಿ ಹುಡುಕಬೇಕು. ಪ್ರತಿವಾರಿ "ನರಿ" ಊದುವಾಗಲೂ, ಅವನು/ಅವಳು ವಿವಿಧ ದಿಕ್ಕುಗಳಲ್ಲಿ ಶಬ್ದವನ್ನು ಮಾಡಬೇಕು. "ನರಿಗೆ" ತಾನು ಬಲಿಗೆ ಬಿದ್ದಂತೆ ಅನ್ನಿಸಿದರೆ, ಅವನು/ಅವಳು ಭಾಗವಹಿಸುವವರೆಲ್ಲರೂ ತಾನಿರುವ ಸ್ಥಳಕ್ಕೆ ಬರುವ ತನಕ ಶಿಳ್ಳೆ ಊದುತ್ತಲೇ ಇರಬೇಕು. ಉದಾಹರಣೆಗೆ, "ನರಿ" ಶಿಳ್ಳೆ ಊದುತ್ತಿದೆ ಎಂದು ನಂಬುವ ಹಂತಕ್ಕೆ ಹೋಗುತ್ತಾರೆ ಮತ್ತು ಮಾಡಬೇಕಾದ ಚಟುವಟಿಕೆಯನ್ನು ಹುಡುಕುತ್ತಾರೆ. ಉದಾಹರಣೆಗೆ: ಐದು ಸಲ ಜಿಗಿಯಿರಿ, ಪಾಠದ ಪ್ರಮುಖ ವಾಕ್ಯವನ್ನು ಹೇಳಿರಿ, ನಂತರ ಪ್ರತಿಯೊಬ್ಬ ವಿದ್ಯಾರ್ಥಿಗೆ ಕ್ಯಾಂಡಿ, ಅಥವಾ ಎಲ್ಲರಿಗೂ ಪಾನೀಯವನ್ನು ಕೊಡಿರಿ.

# 9. ಕಡ್ಡಿ ನೆಡುವದು



ಮಕ್ಕಳು ಕೋಲು ಮತ್ತು ಕೊಂಬೆಗಳನ್ನು ಜೋಡಿಸಲು ಇಷ್ಟಪಡುತ್ತಾರೆ. ಒಣ ಕೊಂಬೆಗಳಿಂದ ಮಾಡಿದ ಶಾಹಿನ ಹೂದಾನಿ ಮಾಡಿ, ರಬ್ಬರ್ ಬ್ಯಾಂಡ್ ಗಳ ಸಹಾಯದಿಂದ ಅವುಗಳನ್ನು ಖಾಲಿ ಹೂದಾನಿ, ಪಾತ್ರೆ ಅಥವಾ ಮರುಬಳಕೆಯ ತಗಡಿನ ಡಬ್ಬಿಗೆ ಹಿಡಿದಿಟ್ಟುಕೊಳ್ಳಿ. ಮಕ್ಕಳು ತಮ್ಮದೇ ಆದ ಕೊಂಬೆಗಳನ್ನು ಮತ್ತು ಕೋಲುಗಳನ್ನು ಸಂಗ್ರಹಿಸಲು ಅವು ತಮ್ಮ ಹೂದಾನಿಂತಲೂ ಉದ್ದವಾಗಿದೆ ಎಂದು ಖಚಿತಪಡಿಸಿಕೊಳ್ಳಿ. ಹೂದಾನಿಯ ಸುತ್ತಲೂ ಎರಡು ರಬ್ಬರ್ ಬ್ಯಾಂಡ್ ಗಳನ್ನು ಹಾಕಿ ಮತ್ತು ಹೂದಾನಿ ಹೊದಿಸುವವರಿಗೆ ರಬ್ಬರ್ ಬ್ಯಾಂಡ್ ಗಳ ಕೆಳಗೆ ಕೋಲುಗಳನ್ನು ಹಾಕಿ. ಬ್ಯಾಂಡ್ ಗಳನ್ನು ಒಟ್ಟಿಗೆ ಸರಿಸಿ ಮತ್ತು ಅವುಗಳ ಮೇಲೆ ಸುಂದರವಾದ ಅಲಂಕಾರ ಪಟ್ಟಿಯನ್ನೂ ಹಾಕಿ. ನೀವು ಬಯಸಿದಲ್ಲಿ, ಎಲ್ಲಾ ಕೊಂಬೆಗಳನ್ನು ಒಂದೇ ಎತ್ತರಕ್ಕೆ ಕತ್ತರಿಸಬಹುದು. ನಿಮ್ಮ ಶಿಬಿರದ ಆಹಾರ ಸ್ಥಳವನ್ನು ಅಲಂಕರಿಸಲು ಹೂದಾನಿಯನ್ನು ಕಾಡುಹೂವುಗಳಿಂದ ಅಲಂಕರಿಸಿರಿ ಅಥವಾ ನಿಮ್ಮ ವಿದ್ಯಾರ್ಥಿಗಳ ಕುಟುಂಬಗಳವರ ಮನೆಗೆ ಅವುಗಳನ್ನು ಉಡುಗೊರೆಯಾಗಿ ಕಳುಹಿಸಿರಿ.

# 10. ಮನೆಯಲ್ಲೇ ಮಾಡುವ ಸೀಮೆ ಸುಣ್ಣ



ನಿಮ್ಮ ವಿದ್ಯಾರ್ಥಿಗಳು "ಪ್ಲಾಸ್ಟರ್ ಆಫ್ ಪ್ಯಾರಿಸ್" ಉಪಯೋಗದಿಂದ ಮನೆಯಲ್ಲಿಯೇ ಸೀಮೆಸುಣ್ಣ ಮಾಡುವ ಮೂಲಕ ಸಂತೋಷಿಸಬಹುದು! ಪ್ರತಿಯೊಬ್ಬ ಮಗುವಿಗೆ ಶೌಚಾಲಯ ಹಾಳೆಯ ಕೊಳವೆ, ಅಲ್ಯುಮಿನಿಯಮ್ ಹಾಳೆ, ಸಣ್ಣ ಉಪಯೋಗಿಸಿ ಬಿಸಾಡುವ ತಟ್ಟೆ ಮತ್ತು ಚಮಚ ಬೇಕಾಗುತ್ತದೆ. ಸೀಮೆ ಸುಣ್ಣ ಮತ್ತು ಟೇಪ್ ಗೆ ಬಣ್ಣ ಕೊಡಲು ಅವರಿಗೆ ಪೇಂಟ್ ಸಹ ಬೇಕಾಗಬಹುದು. ಶೌಚಾಲಯ ಕಾಗದದ ಕೊಳವೆಯ ಅಂಚಿನಲ್ಲಿ ಒಂದನ್ನು ಬಲವಾದ ಪಟ್ಟಿದಾರದಿಂದ ಮುಚ್ಚುವ ಮೂಲಕ ನಿಮ್ಮ ವಿದ್ಯಾರ್ಥಿಗಳು ಯೋಜನೆಯನ್ನು ಪ್ರಾರಂಭಿಸುವಂತೆ ಮಾಡಿರಿ. ಅಲ್ಯುಮೀನಿಯನ್ ಹಾಳೆಯ ತುಂಡನ್ನು ಸುರಳಿಮಾಡಿ ಕೊಳವೆಗೆ ಸಿಕ್ಕಿಸಿ ಅದರ ನಿಮಿತ್ತ ಒಳಭಾಗವನ್ನು ಜೋಡಿಸಿ ಹೊಂದಿಸಿರಿ. ಸುರಕ್ಷಿತ ಮೇಲ್ಮೈಯಲ್ಲಿ ಕೊಳವೆಯನ್ನು ಲಂಬವಾಗಿ ಇರಿಸಿ ಬಟ್ಟಲಿನಲ್ಲಿ ನಿಮ್ಮ ವಿದ್ಯಾರ್ಥಿಗಳಿಗೆ ಒಂದು ಬಟ್ಟಲು  ಪ್ಯಾರಿಸಿನ ಲೇಪನವನ್ನು ಅದೇ ಬಟ್ಟಲು ನೀರಿನೊಂದಿಗೆ ಬೆರೆಸಲು ಸಹಾಯ ಮಾಡಿ. (ಇದು ಗಟ್ಟಿಯಾಗುವ ಬಿಳಿ ಬಣ್ಣದ ಪುಡಿಯಾಗಿದೆ). ಮಿಶ್ರಣ ಕರಗುವವರೆಗೆ ನಿಧಾನವಾಗಿ ಮತ್ತು ಸಂಪೂರ್ಣವಾಗಿ ಬೆರೆಸಿ ಸುಮಾರು ಒಂದು ನಿಮಿಷ ಹಾಗೇ ಬಿಡಿರಿ. ನಂತರ ಎರಡು ಚಮಚ ಬಣ್ಣವನ್ನು ಬೆರೆಸಿರಿ (ಅಥವಾ ಸುಣ್ಣಕ್ಕೆ ಹೆಚ್ಚು ಬಣ್ಣ ಬರಲು ಹೆಚ್ಚಾಗಿಯೇ ಹಾಕಿರಿ, ಆದರೂ ಎಚ್ಚರವಾಗಿರಿ ಯಾಕಂದರೆ ಅದು ಕರೆಯಾಗುತ್ತದೆ). ಚೆನ್ನಾಗಿ ಬೆರೆಸಿರಿ. ಕೊಳವೆಯೊಳಗೆ ಚಮಚ ಹಾಕಿರಿ ಮತ್ತು ನಿಧಾನವಾಗಿ ಆಡಿಸುವಾಗ ಮಿಶ್ರಣವು ಕೆಳಭಾಗಕ್ಕೆ ಸೇರಿಕೊಳ್ಳುತ್ತದೆ. ಉಪಯೋಗಿಸುವ ಮೊದಲು ಇಡೀ ರಾತ್ರಿ ಅದನ್ನು ಒಣಗಿಸಿರಿ.

# 11. ನೀರಿನ ಶೀಷೆಯ ಕರಕುಶಲ



ನಿಮ್ಮ ವಿದ್ಯಾರ್ಥಿಗಳು ಹೊರಗೆ ಶಿಬಿರಕ್ಕೆ ಹೋಗುವಾಗ ಉಪಯೋಗಿಸಲು ಅವರೊಂದಿಗೆ ನಿಮ್ಮ ಸ್ವಂತ ನೀರಿನ ಶೀಷೆಯನ್ನು ಮಾಡಿರಿ. ಪ್ರತಿಯೊಬ್ಬ ವಿದ್ಯಾರ್ಥಿಗೆ ಉಪಯೋಗಿಸಿ ಬಿಸಾಡುವ ನೀರಿನ ಶೀಷೆ ಮತ್ತು ಅದನ್ನು ಅಲಂಕರಿಸಲು ಬಟ್ಟೆ ಅಥವಾ ಹಾಳೆಯನ್ನು ಕೊಡಿರಿ. ಸರಳವಾದ ಅಲಂಕಾರವೇನೆಂದರೆ ನೀರಿನ ಶೀಷೆಯ ಮೇಲೆ ನೀರನ್ನು ಎಳೆಕೊಳ್ಳುವಂಥ ಬಟ್ಟೆಯನ್ನು ಹಾಕಬೇಕು ಮತ್ತು ಶೀಷೆಯ ಸುತ್ತಲು ಅದನ್ನು ಎಳೆಯಬೇಕು. ಅದನ್ನು ಭದ್ರಪಡಿಸಲು ಸಿಲಿಕೋನ್ ಅಂಟು ಅಥವಾ ಬಿಸಿ ಅಂಟನ್ನು ಉಪಯೋಗಿಸಬಹುದು. ಸೂಜಿ ಮತ್ತು ದಾರದೊಂದಿಗೆ ನೀವು ಮೂಲೆಗಳನ್ನು ಬಲಪಡಿಸಬಹುದು. ಇದಲ್ಲದೆ ಹಿಡಿಯನ್ನು ತೋರಿಸುವದಕ್ಕೆ ನೀವು ಬಟ್ಟೆ ಅಥವಾ ರಿಬ್ಬನ್ ಉಪಯೋಗಿಸಬಹುದು. ಹಿಡಿಯನ್ನು ಅಂಟಿಸಲು ಸಿಲಿಕೋನ್ ಅಂಟು ಅಥವಾ ಬಿಸಿ ಅಂಟು ಬಳಸಬಹುದು ಮತ್ತು ಸೂಜಿ ಹಾಗೂ ದಾರದಿಂದ ಭದ್ರಪಡಿಸಬಹುದು.

# ಕರಕುಶಲ




## 12. ಅಂಚೆಪೆಟ್ಟಿಗೆ ಕರಕುಶಲ

ವಿದ್ಯಾರ್ಥಿಗಳು ತಮ್ಮದೇ ಆದ ಅಂಚೆಪೆಟ್ಟಿಗೆಯನ್ನು ಮತ್ತು ಅದರ ಮುಚ್ಚಳವನ್ನು ಮರುಬಳಕೆ ತಗಡಿನ ಡಬ್ಬಿಯಿಂದ ಮಾಡಬಹುದು! ಈ ರೀತಿಯಾಗಿ, ನೀವು ಶಿಬಿರದ ಸಮಯದಲ್ಲಿ ಪರಸ್ಪರ ಒಬ್ಬರಿಗೊಬ್ಬರು ಟಿಪ್ಪಣಿಗಳನ್ನು ವಿನಿಮಯ ಮಾಡಿಕೊಳ್ಳಬಹುದು, ಅಥವಾ ಮನೆಯಿಂದ ಅಥವಾ ನಿಮ್ಮ ಶಿಬಿರದ ನಾಯಕನಿಂದ ತಮಾಷೆಯ ಟಿಪ್ಪಣಿಗಳನ್ನು ಪಡೆಯಬಹುದು. ಪ್ರತಿಯೊಬ್ಬ ವಿದ್ಯಾರ್ಥಿಯು ತನ್ನ ಅಂಚೆಪೆಟ್ಟಿಗೆಯನ್ನು ತನ್ನಿಷ್ಟದಂತೆ ಅಲಂಕರಿಸಬಹುದು, ನಂತರ ಅಂಚೆಪೆಟ್ಟಿಗೆಯನ್ನು ಮರಕ್ಕೆ ಕಟ್ಟಬಹುದು, ಅಥವಾ ಅದನ್ನು ಮರದ ಕೊಂಬೆಗಳ ನಡುವೆ ಇಡಬಹುದು. ಸಂತೋಷವು ಪ್ರಾರಂಭವಾಗಲಿ!

## 13. ಪ್ರಕೃತಿಯ ಉಜ್ಜುವಿಕೆಗಳು (ಮುದ್ರಣ)

ಇದು ಸುಲಭವಾದ ಆಲೋಚನೆಯಾಗಿದೆ. ಎಲೆಯ ಮುದ್ರಣ ಅಥವಾ "ಉಜ್ಜುವಿಕೆಗಳನ್ನು" ಮಾಡಲು ಮರದ ಎಲೆ ಅಥವಾ ತೊಗಟೆ ಅಥವಾ ಕಲ್ಲಿನ ಮೇಲೆ ನಿಮಗೆ ಬೇಕಾದ ಯಾವುದೆ ವಿನ್ಯಾಸದ ವಸ್ತುಗಳನ್ನು ಉಪಯೋಗಿಸಬಹುದು. ಬಣ್ಣದ ಬಳಪ ಅಥವಾ ಸೀಮೆ ಸುಣ್ಣವನ್ನು ಉಜ್ಜಿರಿ (ನೀವೇ ಮಾಡಿರುವ ಸೀಮೆ ಸುಣ್ಣವನ್ನು ಬೇಕಾದರೆ ಉಪಯೋಗಿಸಬಹುದು). ಮೇಲಿನ ನಿರ್ದಿಷ್ಟ ಭಾಗವು ಗಾಢವಾದ ಗೆರೆಗಳನ್ನು ಕೊಡುತ್ತದೆ. ಸ್ವಲ್ಪ ಉಜ್ಜಿದ ನಂತರ, ಹಾಳೆಯ ಮೇಲೆ ನಿಮಗೆ ಅದರ ಚಿತ್ರವು ಬರುವದು. ಮಕ್ಕಳು ಶಿಬಿರದಲ್ಲಿರುವ ಸಮಯದಲ್ಲಿ ಅಂಥ "ಉಜ್ಜುವಿಕೆಗಳ" ಸಂಗ್ರಹವನ್ನು ಮಾಡಬಹುದು.





## 14. ಊರುಗೋಲು



ನಿಮ್ಮ ವಿದ್ಯಾರ್ಥಿಗಳು ತಮ್ಮ ನಡೆಯುವ ಚಟುವಟಿಕೆಗಾಗಿ ಉತ್ತಮವಾದ ಊರುಗೋಲನ್ನು ತೆಗೆದುಕೊಳ್ಳಬೇಕು. ಅವುಗಳನ್ನು ಅಲಂಕರಿಸಲು ಅವರಿಗೆ ಸ್ವಲ್ಪ ಸಮಯ ಕೊಡಿರಿ. ಅವುಗಳನ್ನು ಅಲಂಕರಿಸಲು ಸಹಾಯ ಮಾಡುವದಕ್ಕಾಗಿ ಶಿಬಿರಕ್ಕೆ ಕೆಲವು ವಸ್ತುಗಳನ್ನು ತನ್ನಿರಿ; ವಿವಿಧ ಬಗೆಯ ಬಣ್ಣಗಳು, ರೆಕ್ಕೆಗಳು, ಅಥವಾ ಮಣಿಗಳನ್ನು ಹಾಕಿರಿ. ಪ್ರಕೃತಿಯ ವಸ್ತುಗಳನ್ನು, ಅಂದರೆ ಮರದ ಎಲೆಗಳು ಮತ್ತು ಅಸಹಜವಾದ ಸಣ್ಣ ಕಡ್ಡಿಗಳನ್ನು ಉಪಯೋಗಿಸುವಂತೆ ನಿಮ್ಮ ವಿದ್ಯಾರ್ಥಿಗಳನ್ನು ಪ್ರೋತ್ಸಾಹಪಡಿಸಿರಿ. ಅವರು ತಮ್ಮ ಊರುಗೋಲುಗಳನ್ನು ಮಾಡುವದರಲ್ಲಿ ಮತ್ತು ತಾವು ನಡೆಯುವ ಸಮಯದಲ್ಲಿ ಅದನ್ನು ಉಪಯೋಗಿಸುವಾಗ ಸಂತೋಷಪಡುತ್ತಾರೆ, ನಂತರ ಅವರು ಅದನ್ನು ತಮ್ಮ ಮನೆಗೆ ತೆಗೆದುಕೊಂಡು ಹೋಗಬಹುದು!

# 15. ಕಿತ್ತಳೆ ಹಣ್ಣಿನೊಂದಿಗೆ ಶಿಬಿರದಲ್ಲಿ ತೆರೆದ ಬೆಂಕಿಯೊಂದಿಗೆ ಅಡುಗೆ ಮಾಡುವದು



ಕಿತ್ತಳೆ ಹಣ್ಣಿನೊಳಗೆ ಚಾಕೊಲೇಟ್ ಕೇಕ್:
ಮೂರನೆಯ ಒಂದು ಭಾಗದಷ್ಟು ಕಿತ್ತಳೆ ಹಣ್ಣಿನ ಮೇಲ್ಭಾಗವನ್ನು ಕತ್ತರಿಸಿರಿ-ಕಿತ್ತಳೆಯ ಒಳಭಾಗವನ್ನು ಹೊರಗೆ ತೆಗೆಯಲು ಮಕ್ಕಳು ಚಮಚವನ್ನು ಉಪಯೋಗಿಸಲಿ-ಕಿತ್ತಳೆಯ ಚರ್ಮವು ಮುರಿಯದಂತೆ ಅಥವಾ ಹರಿಯದಂತೆ ನೋಡಿಕೊಳ್ಳಿರಿ. ನಂತರ ಕೇಕ್ ಮಿಶ್ರಣವನ್ನು ಸಿದ್ಧಮಾಡಿರಿ. ಸುಮಾರು ಮೂರನೆಯ ಎರಡು ಭಾಗದಷ್ಟು-ಮಕ್ಕಳಿಂದ ಅವರ ಕಿತ್ತಳೆ ಹಣ್ಣನ್ನು ತುಂಬಿಸಿರಿ. ಕಿತ್ತಳೆ ಹಣ್ಣಿನ ಮುಚ್ಚಳವನ್ನು ಅದರ ಮೇಲೆ ಮುಚ್ಚಿರಿ ಮತ್ತು ಹಣ್ಣನ್ನು ನೆಟ್ಟಗೆ ನಿಲ್ಲಿಸಿರಿ. ನಂತರ ಕಿತ್ತಳೆ ಹಣ್ಣನ್ನು ಗಟ್ಟಿಯಾಗಿರುವ ಅಲುಮೀನಿಯಮ್ ಹಾಳೆಯಿಂದ ಸುತ್ತಿರಿ (ಚಿತ್ರದಲ್ಲಿ ತೋರಿಸಿರುವ ಹಾಗೆ ಮಾಡಿರಿ) ಮತ್ತು ಮೇಲ್ಭಾಗದಲ್ಲಿ ಚಿಕ್ಕ ಕುಣಿಕೆಯನ್ನು ಮಾಡಿರಿ ಅದು ಶಿಬಿರದಲ್ಲಿನ ತೆರೆದ ಬೆಂಕಿಯ ಇದ್ದಲುಗಳಿಂದ ಕಿತ್ತಲೆ ಹಣ್ಣುಗಳನ್ನು ತೆಗೆಯಲು ಸಹಾಯ ಮಾಡುತ್ತದೆ. ಸುಮಾರು ಇಪ್ಪತ್ತರಿಂದ ಇಪ್ಪತ್ತೈದು ನಿಮಿಷಗಳ ನೀವು ಅದನ್ನು ಬೇಯಿಸಬಹುದು, ಆದರೆ ಇದು ವ್ಯತ್ಯಾಸವಾಗಿರುತ್ತದೆ, ಮತ್ತು ಕಿತ್ತಳೆ ಹಣ್ಣಿನ ಗಾತ್ರ ಹಾಗೂ ಇದ್ದಲಿನ ಗುಣಮಟ್ಟದ ಮೇಲೆ ಆಧಾರವಾಗಿರುತ್ತದೆ-ಆದ್ದರಿಂದ ಇಪ್ಪತ್ತು ನಿಮಿಷಗಳ ನಂತರ ಅವು ಸರಿಯಾಗಿ ಆಗಿದೆಯೋ ಇಲ್ಲವೋ ಎಂಬದನ್ನು ಪರೀಕ್ಷಿಸಿರಿ. ಇದ್ದಲ್ಲನ್ನು ತೆಗೆಯಿರಿ ಮತ್ತು ಅಲುಮೀನಿಯಮ್ ಹಾಳೆ ತಣ್ಣಗಾಗಲು ಕೆಲವು ನಿಮಿಷಗಳು ಬಿರಿ-ನಂತರ ಕಿತ್ತಳೆ ಹಣ್ಣಿನೊಳಗೆ ತಯಾರಾಗಿರುವ ಪದಾರ್ಥವನ್ನು ತೆಗೆಯಲು-ಮತ್ತು ಅದನ್ನು ತಿನ್ನಲು ಮಕ್ಕಳಿಗೆ ಅವಕಾಶ ಕೊಡಿರಿ!

ಕಿತ್ತಳೆ ಹಣ್ಣಿನೊಳಗೆ ಫಲಹಾರ:
ಮತ್ತೊಂದು ಆಯ್ಕೆ ಏನೆಂದರೆ ಕೆಲವು ಮೊಟ್ಟೆಗಳನ್ನು ಹೊಡೆದು ದೊಡ್ಡ ಪಾತ್ರೆಯೊಳಗೆ ಹಾಕಿ ಅದನ್ನು ಚೆನ್ನಾಗಿ ಕಲಸಿರಿ. ಪ್ರತಿಯೊಬ್ಬ ವಿದ್ಯಾರ್ಥಿ ತನ್ನ ಕಿತ್ತಳೆ ಹಣ್ಣಿನೊಳಗೆ ಮೊಟ್ಟೆಯ ಮಿಶ್ರಣವನ್ನು ತುಂಬಿಸಲಿ, ಅದರ ಮೇಲೆ ಮುಚ್ಚಳವನ್ನು ಹಾಕಲಿ, ಮತ್ತು ಅಲುಮೀನಿಯಮ್ ಹಾಳೆಯನ್ನು ಹೊದಿಸಲಿ. ಇದ್ದಲ ಮೇಲೆ ಅದನ್ನು ಬೇಯಿಸಿರಿ. ನಿಮ್ಮ ರುಚಿಗೆ ತಕ್ಕಂತೆ ಉಪ್ಪು ಖಾರ ಬೆರೆಸಿರಿ!

# 16. ತುಂಬಿಸಿದ ಬಾಳೆಹಣ್ಣುಗಳು

ಇದಕ್ಕಾಗಿ ನಿಮಗೆ, ಬಾಳೆಹಣ್ಣುಗಳು, ಕುರುಚಲು ಸಸ್ಯದ ಮಿಠಾಯಿ, ಸಣ್ಣ ಚಾಕೊಲೇಟ್ ತುಂಡುಗಳು, ಚಿಕ್ಕದಾಗಿ ಕತ್ತರಿಸಿರುವ ಅಥವಾ ಜಜ್ಜಿರುವ ಅನಾನಸ್, ಸ್ಟ್ರಾಬೆರ್ರಿ ಜೆಲ್ಲಿ, ತುಂಡುಮಾಡಿದ ಕಡಲೆ ಬೀಜಗಳು ಮತ್ತು ಅಲುಮೀನಿಯಮ್ ಹಾಳೆ (ಅಥವಾ ನಿಮ್ಮ ದೇಶದಲ್ಲಿ ನಿಮಗೆ ಸುಲಭವಾಗಿ ಏನು ಸಿಗುತ್ತದೆಯೋ ಅದನ್ನು ಉಪಯೋಗಿಸಿರಿ). ಬಾಳೆ ಹಣ್ಣಿನ ಸಿಪ್ಪೆಯನ್ನು ತೆಗೆಯದೆಯೇ, ಸಿಪ್ಪೆಯ ಮೇಲೆ ಒಂದು ಚಿಕ್ಕದಾದ ರಂಧ್ರವನ್ನು ಮಾಡಿರಿ ಮತ್ತು ಬಯಸಿದ ಪದಾರ್ಥಗಳನ್ನು ರುಚಿಗೆ ತಕ್ಕಂತೆ ಬಾಳೆ ಹಣ್ಣಿನೊಳಗೆ ಹಾಕಿರಿ. ಬಾಳೆಹಣ್ಣಿಗೆ ಅಲುಮೀನಿಯಮ್ ಹಾಳೆಯನ್ನು ಸುತ್ತಿರಿ ಮತ್ತು ಅದನ್ನು ಶಿಬಿರದಲ್ಲಿನ ತೆರೆದ ಬೆಂಕಿಯ ಇದ್ದಲುಗಳ ಮೇಲೆ ಬೇಯಿಸಿರಿ.



# ಆಹಾರ

## 17. ಬೇಯಿಸಿದ ಆಲೂಗಡ್ಡೆ



ಅಬೆ ಹೊರಗೆ ಹೋಗಲು ಸಹಾಯವಾಗುವ ರೀತಿಯಲ್ಲಿ ಆಲೂಗಡ್ಡೆಯೊಳಗೆ ರಂಧ್ರಗಳನ್ನು ಮಾಡಿರಿ. ಆಲೂಗಡ್ಡೆಗಳನ್ನು ಸಡಿಲವಾಗಿರುವ ಹಾಳೆಯಲ್ಲಿ ಸುತ್ತಿರಿ ಮತ್ತು ಅವುಗಳನ್ನು ಶಿಬಿರದಲ್ಲಿನ ತೆರೆದ ಬೆಂಕಿಯ ಕರಿಗೆಂಡದ ಮೇಲೆ ಇಡಿರಿ. ನೀವು ಅದನ್ನು ಕೋಲು ಅಥವಾ ಮುಳ್ಳು ಚಮಚದಿಂದ ಪರೀಕ್ಷಿಸಬಹುದು. ಆಲೂಗಡ್ಡೆಗಳಿಗೆ ಕೋಲು ಅಥವಾ ಮುಚ್ಚು ಚಮಚವನ್ನು ಚುಚ್ಚಿರಿ. ಒಂದುವೇಳೆ ಆಲೂಗಡ್ಡೆ ಅದರೊಳಗಿಂದ ಸುಲಭವಾಗಿ ಹೊರಗೆ ಬಂದರೆ, ಅದು ಬೆಂದಿದೆ ಎಂದರ್ಥ. ಇವುಗಳು ಬೇಯಲು ಸುಮಾರು ಒಂದು ತಾಸು ಹಿಡಿಯುತ್ತದೆ.

ನೀವು ಅವುಗಳನ್ನು ಹೂಣಲೂಬಹುದು: ಇದಕ್ಕಾಗಿ, ನೀವು ಒಂದು ಹಳ್ಳದಲ್ಲಿ ಬೆಂಕಿಯನ್ನು ಹಾಕಬೇಕು, ಮತ್ತು ಅದು ಬಿಸಿಯಾದ ನಂತರ, ಕರಿಗೆಂಡಗಳನ್ನು ತೆಗೆಯಿರಿ. ಆಲೂಗಡ್ಡೆಗಳನ್ನು ಹಳ್ಳದೊಳಗೆ ಇಡೀರಿ ಮತ್ತು ಮಣ್ಣು ಹಾಕಿ ಮುಚ್ಚಿರಿ. ಮುಚ್ಚಿರುವ ಹಳ್ಳದ ಮೇಲೆ ಬೆಂಕಿಯನ್ನು ಹಾಕಿರಿ ಮತ್ತು ಆಲೂಗಡ್ಡೆಗಳನ್ನು ಬೇಯಿಸುವ ಕಾರ್ಯವನ್ನು ಮುಂದುವರೆಸಿರಿ.

## 18. ಪನ್ನೀರ್ ಟಿಕ್ಕ



ಪನ್ನೀರನ್ನು ಚಿಕ್ಕ ತುಂಡುಗಳಾಗಿ ಮಾಡಿರಿ ಮತ್ತು ಮಕ್ಕಳಿಗೆ ಅವರ ಮೆಚ್ಚಿನ ತಿಂಡಿಯೊಂದಿಗೆ ಲೋಹದ ತುಂಡಿಗೆ ಚುಚ್ಚಲು ಹೇಳಿರಿ. ಅನೇಕ ಪದಾರ್ಥಗಳು ಅಂದರೆ ಮೆಣಸು, ಈರುಳ್ಳಿಗಳು, ಮೆಣಸಿನಕಾಯಿ, ಟಮೊಟೊ, ಮತ್ತು ಅನಾನಸ್ ಸ್ವಾದಿಷ್ಟವಾದ ಊಟವನ್ನು ಒದಗಿಸುತ್ತವೆ. ಎಲ್ಲವುಗಳು ಮಕ್ಕಳು ಸೇವಿಸಲು ಚೆನ್ನಾಗಿ ಬೇಯಿಸಲಾಗಿದೆಯೇ ಎಂಬದನ್ನು ದೃಢಪಡಿಸಿಕೊಳ್ಳಿರಿ.

## 19. ಪ್ರಥಮ ಚಿಕಿತ್ಸೆ ಕಿಟ್



ಒಂದು ಡಬ್ಬಿಯನ್ನು ತೆಗೆದುಕೊಳ್ಳಿರಿ ಮತ್ತು ಅದರೊಳಗೆ ವೈದಕೀಯ ಸಾಮಗ್ರಿಗಳನ್ನು ತುಂಬಿಸಿರಿ ಆಗ ಒಂದುವೇಳೆ ನಿಮ್ಮ ಶಿಬಿರದಲ್ಲಿ ಏನಾದರೂ ಆದರೆ ತಕ್ಷಣ ಪರಿಹಾರಕ್ಕೆ ಸಿದ್ಧರಾಗಿರಬಹುದು. ನಿಮ್ಮ ದೇಶದಲ್ಲಿ ಸಹಜವಾಗಿರುವಂಥ ಔಷಧಿಗಳನ್ನು ಉಪಯೋಗಿಸಿರಿ.

## 20. ಪ್ರತಿಯೊಂದು ಮಗುವಿನ ಫೋಟೋ ತೆಗೆಯಿರಿ

ನಿಮ್ಮ ಶಿಬಿರದಲ್ಲಿರುವ ಮಕ್ಕಳ ಇತ್ತೀಚೆಗಿನ ಫೋಟೋವನ್ನು ಯಾವಾಗಲೂ ತೆಗೆಯಿರಿ. ನೀವು ಅವುಗಳನ್ನು ಎಂದಿಗೂ ಈ ಕಾರಣಕ್ಕೆ ಉಪಯೋಗಿಸಬಾರದೆಂಬದು ನಮ್ಮ ನಿರೀಕ್ಷೆಯಾಗಿದೆ, ಅಂದರೆ ಮಗು ಎಂದಿಗೂ ಕಾಣೆಯಾಗಬಾರದು, ಒಂದುವೇಳೆ ಹಾಗೇನಾದರೂ ಆದರೆ ಇತ್ತೀಚೆಗಿನ ಫೋಟೋ ಇದ್ದರೆ ಶಿಬಿರದ ಸುತ್ತಲು ಹುಡುಕಲು ಸಾಧ್ಯವಾಗುತ್ತದೆ. ಫೋಟೋಗಳನ್ನು ತೊಳೆಸಿ ಇಟ್ಟುಕೊಳ್ಳುವ ಅವಶ್ಯಕತೆಯಿಲ್ಲ ಯಾಕಂದರೆ ಈಗಿನ ದಿನಗಳಲ್ಲಿ ಎಲ್ಲರ ಬಳಿಯಲ್ಲಿಯೂ ಡಿಜಿಟಲ್ ಕ್ಯಾಮೆರಾಗಳಿವೆ, ಆದ್ದರಿಂದ ನಿಮ್ಮ ಸೆಲ್ ಫೋನಿನಲ್ಲಿ ಫೋಟೋ ಇದ್ದರೆ ಆ ಸಮಯದಲ್ಲಿ ಉಪಯೋಗಿಸಬಹುದು.



## 21. ಪ್ರಥಮ ಚಿಕಿತ್ಸೆ ಕಿಟ್




ಒಂದು ಡಬ್ಬಿಯನ್ನು ತೆಗೆದುಕೊಳ್ಳಿರಿ ಮತ್ತು ಅದರೊಳಗೆ ವೈದಕೀಯ ಸಾಮಗ್ರಿಗಳನ್ನು ತುಂಬಿಸಿರಿ ಆಗ ಒಂದುವೇಳೆ ನಿಮ್ಮ ಶಿಬಿರದಲ್ಲಿ ಏನಾದರೂ ಆದರೆ ತಕ್ಷಣ ಪರಿಹಾರಕ್ಕೆ ಸಿದ್ಧರಾಗಿರಬಹುದು. ನಿಮ್ಮ ದೇಶದಲ್ಲಿ ಸಹಜವಾಗಿರುವಂಥ ಔಷಧಿಗಳನ್ನು ಉಪಯೋಗಿಸಿರಿ.

ನಮ್ಮ ಸಲಹೆ ಏನೆಂದರೆ:



• ನೈರ್ಮಲ್ಯ ಅಂಟಿಕೊಳ್ಳುವ ಪಟ್ಟಿಗಳು ಅಥವಾ ಬ್ಯಾಂಡ್ ಏಡ್ಸ್.



• ಸುಟ್ಟ ಗಾಯಗಳಿಗೆ ಕ್ರೀಮ್ ಅಥವಾ ಅಲೋವೆರಾ.




• ಮೂಲಭೂತ ಔಷಧಿಗಳು, ಜ್ವರ ಕಡಿಮೆಯಾಗಲು ಆಸ್ಪಿರಿನ್ ಅಥವಾ ಪ್ಯಾರಾಸೆಟಮೊಲ್.



• ಒಂದುವೇಳೆ ಮಕ್ಕಳ ಕಣ್ಣುಗಳೊಳಗೆ ಏನಾದರು ಬಿದ್ದರೆ ಕಣ್ಣಿನ ಹನಿ.



• ಒರೆಯಾದ ಬದಿಗಳನ್ನು ತೆಗೆಯಲು ಚಿಮುಟಗಳು.



• ಸೊಳ್ಳೆ ಕಡಿತದಿಂದಾಗುವ ತುರಿಕೆಗೆ ಹಚ್ಚಲು ಮುಲಾಮು ಅಥವಾ



ಅಜೀರ್ಣ, ಹೊಟ್ಟೆ ತೊಳಸುವಿಕೆ, ವಾಕರಿಕೆ, ಅಥವಾ ಅತಿಸಾರದ ಸಮಸ್ಯೆಗಳಿಗೆ ಪುದಿನಹರ.

## 22. ಲೈಂಗಿಕ ದುರ್ನಡತೆಯ ಸಮಸ್ಯೆಗಳು ಉಂಟಾಗದಂತೆ ಎಚ್ಚರವಾಗಿರಿ



ಪುರುಷರು ತಮ್ಮ ಸೇವೆಯನ್ನು ಪುರುಷರ ಕಡೆಗೆ, ಮತ್ತು ಸ್ತ್ರೀಯರು ಸ್ತ್ರೀಯರ ಕಡೆಗೆ ಗಮನ ಕೊಡಬೇಕು. ವಿರುದ್ಧ ಲಿಂಗದ ವ್ಯಕ್ತಿಯ ಜೊತೆ ಒಂಟಿಯಾಗಿ ಹೊರಗೆ ಹೋಗಬಾರದು. ಶಿಬಿರಾರ್ಥಿಯೊಂದಿಗೆ ಮರಗಳ ನಡುವೆ ನಡೆದಾಡುವ ಅವಶ್ಯಕತೆಯಿಲ್ಲ, ಅವನಾಗಲಿ ಅಥವಾ ಅವಳಾಗಲಿ ನಿಮ್ಮೊಂದಿಗೆ ಮಾತನಾಡಬೇಕು ಎಂದು ಎಷ್ಟೇ ಹೇಳಿದರೂ, ಒಂದುವೇಳೆ ನೀವು ವಿರುದ್ಧ ಲಿಂಗದವರಾಗಿದ್ದರೆ ಕೇಳುವ ಅವಶ್ಯಕತೆ ಇಲ್ಲ. ಇತರರು ನಿಮ್ಮ ಅಪ್ಪುಗೆಯನ್ನು ಇಷ್ಟಪಡುತ್ತಾರೆ ಅಥವಾ ನೀವು ಅವರನ್ನು ಮುಟ್ಟಬೇಕೆಂದು ಬಯಸುತ್ತಾರೆಂಬದನ್ನು ಊಹಿಸಿಕೊಳ್ಳಬೇಡಿರಿ. ಮತ್ತು ವಿರುದ್ಧ ಲಿಂಗದ ವ್ಯಕ್ತಿಯನ್ನು ಅಪ್ಪಿಕೊಳ್ಳುವಾಗ, ಸಣ್ಣ ಅಪ್ಪುಗೆ ಮತ್ತು "ಪಕ್ಕದ ಅಪ್ಪುಗೆ" ಕಡಿಮೆ "ತಪ್ಪು ತಿಳುವಳಿಕೆಯನ್ನು" ಕೊಡುತ್ತವೆ.

# ಭದ್ರತೆ

## 23. ಶಿಬಿರದ ನಿಯಮಗಳನ್ನು ಘೋಷಿಸಿರಿ

ನೀವು ನಿಮಗೆ ಬೇಕಾದ ನಿಯಮಗಳನ್ನು ಆಯ್ಕೆಮಾಡಿಕೊಳ್ಳಿರಿ, ಆದರೆ ಅದು ಎಲ್ಲರಿಗೂ ತಿಳಿದಿದೆಯೇ ಎಂಬದನ್ನು ದೃಢಪಡಿಸಿಕೊಳ್ಳಿರಿ. ಈ ಆಲೋಚನೆಗಳಲ್ಲಿ ಕೆಲವನ್ನು ಸೇರಿಸಿಕೊಳ್ಳಿರಿ: ಯಾವಾಗಲೂ ಶೂ ಧರಿಸಿಕೊಳ್ಳಿರಿ, ಜಗಳವಾಡಬೇಡಿರಿ, ಮತ್ತು ಗುಡಾರಗಳೊಳಗೆ ತಿನ್ನಬೇಡಿರಿ. ಮತ್ತು ನನ್ನ ಮೆಚ್ಚಿನದ್ದು: "ಸ್ನೇಹಿತರ" ವ್ಯವಸ್ಥೆಯನ್ನು ಉಪಯೋಗಿಸಿರಿ. ಶಿಬಿರಾರ್ಥಿಗಳು ಒಂಟಿಯಾಗಿ ಹೋಗುವದು ಅನಾವಶ್ಯಕವಾಗಿರುತ್ತದೆ ಒಂದುವೇಳೆ ಹೆಚ್ಚು ಸಮಯ ಅವರು ನಿಮಗೆ ಕಾಣಿಸದೆ ಹೋದರೆ, ಒಂದೇ ಲಿಂಗದ ಮತ್ತೊಬ್ಬ ವ್ಯಕ್ತಿಯನ್ನು ಮುಂದಿನ ಸಲ ಜೊತೆಯಾಗಿ ಕಳುಹಿಸಿರಿ.




## 24. ಲೈಂಗಿಕ ದುರ್ನಡತೆಯ ಸಮಸ್ಯೆಗಳು ಉಂಟಾಗದಂತೆ ಎಚ್ಚರವಾಗಿರಿ



ಪುರುಷರು ತಮ್ಮ ಸೇವೆಯನ್ನು ಪುರುಷರ ಕಡೆಗೆ, ಮತ್ತು ಸ್ತ್ರೀಯರು ಸ್ತ್ರೀಯರ ಕಡೆಗೆ ಗಮನ ಕೊಡಬೇಕು. ವಿರುದ್ಧ ಲಿಂಗದ ವ್ಯಕ್ತಿಯ ಜೊತೆ ಒಂಟಿಯಾಗಿ ಹೊರಗೆ ಹೋಗಬಾರದು. ಶಿಬಿರಾರ್ಥಿಯೊಂದಿಗೆ ಮರಗಳ ನಡುವೆ ನಡೆದಾಡುವ ಅವಶ್ಯಕತೆಯಿಲ್ಲ, ಅವನಾಗಲಿ ಅಥವಾ ಅವಳಾಗಲಿ ನಿಮ್ಮೊಂದಿಗೆ ಮಾತನಾಡಬೇಕು ಎಂದು ಎಷ್ಟೇ ಹೇಳಿದರೂ, ಒಂದುವೇಳೆ ನೀವು ವಿರುದ್ಧ ಲಿಂಗದವರಾಗಿದ್ದರೆ ಕೇಳುವ ಅವಶ್ಯಕತೆ ಇಲ್ಲ. ಇತರರು ನಿಮ್ಮ ಅಪ್ಪುಗೆಯನ್ನು ಇಷ್ಟಪಡುತ್ತಾರೆ ಅಥವಾ ನೀವು ಅವರನ್ನು ಮುಟ್ಟಬೇಕೆಂದು ಬಯಸುತ್ತಾರೆಂಬದನ್ನು ಊಹಿಸಿಕೊಳ್ಳಬೇಡಿರಿ. ಮತ್ತು ವಿರುದ್ಧ ಲಿಂಗದ ವ್ಯಕ್ತಿಯನ್ನು ಅಪ್ಪಿಕೊಳ್ಳುವಾಗ, ಸಣ್ಣ ಅಪ್ಪುಗೆ ಮತ್ತು "ಪಕ್ಕದ ಅಪ್ಪುಗೆ" ಕಡಿಮೆ "ತಪ್ಪು ತಿಳುವಳಿಕೆಯನ್ನು" ಕೊಡುತ್ತವೆ.

# 25. ಕಾಫಿ ಅಥವಾ ಚಹಾ



ನಿಮ್ಮ ಶಿಬಿರದಲ್ಲಿ ಕಾಫಿ ವಂಚಿತ ನಾಯಕರ ಗುಂಪು ನೀವು ಬಯಸುವದಿಲ್ಲ! ನಿಮ್ಮ ನಿದ್ರೆಯ ವಂಚಿತ ತಂಡದವರಿಗೆ ಕಾಫಿ ಅಥವಾ ಚಹಾ ಸಿಗುವಂತೆ ನೋಡಿಕೊಳ್ಳಿರಿ. ನಿಮ್ಮ ನಾಯಕರು ಬಹಳ ಸಂತೋಷ ಅನುಭವಿಸಬೇಕೆಂದು ನೀವು ಬಯಸುವಿರಿ! ಇದು ಕೇವಲ ನಿಮಗಾಗಿ ಮಾತ್ರವಲ್ಲ, ಬದಲಾಗಿ ಶಿಬಿರಾರ್ಥಿಗಳಿಗೂ ಅತ್ಯಂತ ಪ್ರಾಮುಖ್ಯವಾದ ಸುರಕ್ಷಿತ ಸಲಹೆಯಾಗಿದೆ (ಹಾ ಹ)!

# ಹೆಚ್ಚುವರಿ ಆಲೋಚನೆಗಳು

## ಹೆಚ್ಚುವರಿ ಆಲೋಚನೆಗಳು

ಕಲೆಹಾಕು (ರ್ಯಾಲಿ)/ಅಡೆತಡೆಯ ಚಲನೆ
ಕಲೆಹಾಕು ಅಥವಾ ಅಡೆತಡೆಯ ಅಧ್ಯಯನವು ನಿಮ್ಮ ಮಾರ್ಗದರ್ಶನಗಳನ್ನು ಅನುಸರಿಸುತ್ತಾ, ಮಕ್ಕಳು ತೆಗೆದುಕೊಳ್ಳುವ ವಿಶೇಷ ಮಾರ್ಗಗಳೊಂದಿಗಿನ ಯೋಜಿತ ಚಟುವಟಿಕೆಯಾಗಿದೆ. ಅಧ್ಯಯನದ ಪ್ರತಿಯೊಂದು ಭಾಗದಲ್ಲಿಯೂ, ಅವರು ದಾರಿಯನ್ನು ಹುಡುಕಬೇಕು ಮತ್ತು ವಿವಿಧ ಚಟುವಟಿಕೆಗಳನ್ನು ನಡೆಸಬೇಕು. ಅತಿ ಹೆಚ್ಚು ಸಂಖ್ಯೆಯ ಚಟುವಟಿಕೆಗಳನ್ನು ನಡೆಸುವ ಅಥವಾ ಹೆಚ್ಚು ಸಂಖ್ಯೆಯ ದಾರಿಗಳನ್ನು ಹುಡುಕುವ ಮಕ್ಕಳು ಗೆಲ್ಲುತ್ತಾರೆ. ಪ್ರತಿಯೊಂದು ತಂಡವು ತನ್ನ ಸೂಚನಾ ಹಾಳೆಯನ್ನು ತರಬೇಕು ಮತ್ತು ವಸ್ತುಗಳನ್ನು ಇಟ್ಟುಕೊಳ್ಳಲು ಚೀಲವನ್ನು ಹೊಂದಿರಬೇಕು. ಪ್ರತಿಯೊಂದು ಕೇಂದ್ರದಲ್ಲಿಯೂ, ವಯಸ್ಕರು ಮೇಲ್ವಿಚಾರಣೆ ನಡೆಸುತ್ತಿರಬೇಕು. ಅಂಕಗಳು ಮತ್ತು ಬಾವುಟ, ಪದವಿಪತ್ರ, ಅಥವಾ ಇತರೆ ವಸ್ತುಗಳನ್ನು ಕೊಡಿರಿ.

ಸಲಹೆಗಳು:
• ಸೇಬು ಅಥವಾ ಡೋನಟ್ ಮೇಲಿಂದ ದಾರಕ್ಕೆ ಕಟ್ಟಿ ತಿನ್ನಿರಿ.
• ಯಾವುದಾದರು ಮರವನ್ನು ಹತ್ತಿರಿ ಮತ್ತು ನೀವು ನಿಜವಾಗಿಯೂ ಮೇಲೆ ಹತ್ತಿರುವಿರಿ ಎಂಬದಕ್ಕೆ ಸಾಕ್ಷಿಯಾಗಿ ಅಲ್ಲಿಂದ ಯಾವುದಾದರು ವಸ್ತುವನ್ನು ತನ್ನಿರಿ (ಉದಾಹರಣೆಗೆ ಧ್ವಜ).
• ಕೆಲವು ಬಾರಿ ಹಗ್ಗ ಜಿಗಿಯಿರಿ.
• ನಿರ್ದಿಷ್ಟ ಅವಧಿಗೆ ನಡೆಯಿರಿ.
• ಹಗ್ಗದ ಏಣಿಯನ್ನು ಹತ್ತಿರಿ (ನೀವು ಅದನ್ನು ಜೇಡರ ಬಲೆಯಾಗಿ ಕಾಣಿಸುವಂತೆ ಮಾಡಬಹುದು ಅಥವಾ ಬೇರೆ ಏನಾದರು ವಿನ್ಯಾಸ ಮಾಡಬಹುದು).
• ಒಂದೇ ಕಾಲಿನಲ್ಲಿ ಜಿಗಿಯುವಾಗ ಕೆಲವು ಸಮಯ ಚೆಂಡನ್ನು ಬೌನ್ಸ್ ಮಾಡಿರಿ.
• ಕುರ್ಚಿಯಲ್ಲಿ ಬಲೂನನ್ನು ಇಟ್ಟು ಅದರ ಮೇಲೆ ಕೂತು ಅದನ್ನು ಒಡೆಯಿರಿ.
• ಬಲೂನುಗಳಿಂದ ತುಂಬಿರುವ ಪಾತ್ರೆಯೊಳಗೆ ಬಚ್ಚಿಟ್ಟಿರುವ ಕೆಲವು ವಸ್ತುಗಳನ್ನು ಹುಡುಕಿರಿ (ಈ ಉದ್ದೇಶಕ್ಕೆ ಗಾಳಿ ತುಂಬಬಹುದಾದ ಕೊಳವನ್ನು ಸೇರಿಸಬಹುದು).
• ಹಿಟ್ಟು ತುಂಬಿದ ತಟ್ಟೆಯೊಳಗಿರುವ ಕೆಲವು ವಸ್ತುಗಳನ್ನು ಹುಡುಕುವದು. ಅದು ನಾಣ್ಯವಾಗಿರಬಹುದು. ಇದಕ್ಕಾಗಿ, ಅವರು ತಮ್ಮ ಕೈಗಳನ್ನು ಬೆನ್ನ ಹಿಂದೆ ಕಟ್ಟಿಕೊಳ್ಳಬೇಕು ಮತ್ತು ತಮ್ಮ ಹಲ್ಲುಗಳಿಂದ

ತೆಗೆಯಬೇಕು.
• ಸಮತೋಲನ ಕಳೆದುಕೊಳ್ಳದೆ ನೆಲದ ಮೇಲಿನ ಹಗ್ಗದ ಮೇಲೆ ನಡೆಯಿರಿ.
• ಗೋಣಿ ಚೀಲದಂತೆ, ಚೀಲದೊಳಗಿಂದ ನಿರ್ದಿಷ್ಟವಾದಷ್ಟು ದೂರ ಜಿಗಿಯಿರಿ.
• ಎರಡು ಸಾಲುಗಳಲ್ಲಿ ಹಲವು ಟೈಯರ್ ಗಳನ್ನು ಇಟ್ಟು ಅವುಗಳ ನಡುವೆ ಜಿಗಿಯಿರಿ.








# ಗುಡಾರವನ್ನು ಹಾಕುವದು ಹೇಗೆ:



1. ಹಲವು ಹೊದಿಕೆಗಳು ಮತ್ತು ಕಂಬಳಿಗಳನ್ನು ತೆಗೆದುಕೊಳ್ಳಿರಿ ಮತ್ತು ಅವುಗಳು ಪೂರ್ಣ ಅಳತೆಯಲ್ಲಿ ಉಳಿಯುವಂತೆ ತಗಲುಹಾಕಿರಿ.
2. ಗುಡಾರಕ್ಕೆ ಬೆಂಬಲವಾಗಿ ಕುರ್ಚಿಗಳನ್ನು ಇಡಿರಿ. ನೀವು ಮೇಜುಗಳು, ಗಟ್ಟಿಯಾದ ಫಲಕಗಳನ್ನು ಉಪಯೋಗಿಸಬಹುದು, ಅಥವಾ ಮರಗಳಿಗೆ ಹಗ್ಗಗಳನ್ನು ಕಟ್ಟಬಹುದು.
3. ಕಂಬಳಿ ಅಥವಾ ಹೊದಿಕೆಗಳಿಂದ ಪೀಠೋಪಕರಣಗಳನ್ನು ಮುಚ್ಚಿರಿ. ಕಂಬಳಿಗಳ ಮೂಲೆಗಳನ್ನು ಭಾರವಾದ ಪುಸ್ತಕಗಳಿಂದ ಹಿಡಿದಿಡಿರಿ ಅಥವಾ ಕುರ್ಚಿಗಳ ಕಾಲುಗಳಿಂದ ಅವುಗಳಲ್ಲಿ ಸರಿಯಾದ ಸ್ಥಳದಲ್ಲಿ ಇರಿಸಿರಿ. ಆವರಿಸಿಕೊಂಡಿರುವ ಸ್ಥಳವನ್ನು ಹೆಚ್ಚಿಸಲು ಕಂಬಳಿಗಳ ಮೂಲೆಗಳನ್ನು ಕಟ್ಟಿರಿ.
4. ಹೆಚ್ಚಿನ ಅನುಕೂಲತೆಗಾಗಿ ಗುಡಾರದೊಳಗೆ ದಿಂಬುಗಳನ್ನು ಇಡಿರಿ, ಮತ್ತು ಸಂತೋಷಪಡಿರಿ!





# Follow us on...

facebook

Like!

## ChildrenAreImportant

Camping with Childen
Kannada
20165

www.ChildrenAreImportant.com
info@childrenareimportant.com
WhatsApp: +1 (971) 328-2783

Equip & Grow
ಮಕ್ಕಳೇ ಪ್ರಮುಖರು